# 10

# ಸಮತೋಲನವಾದ ಒಂದು ಜೀವಿತ

## (ಅಧ್ಯಾಯ 13)

ಇಬ್ರಿಯ ಬರಹಗಾರನು ತನ್ನ ಪತ್ರಿಕೆಯನ್ನು ಬರೆದು ಮುಗಿಸುವ ಅಂತ್ಯದಲ್ಲಿದ್ದಾನೆ ಎಂದು ಊಹಿಸಿಕೊಳ್ಳಿರಿ. ತನ್ನ ತತ್ವಗಳನ್ನು ತಿಳಿಸಿದ ನಂತರ ಅವರುಗಳು ಭ್ರಷ್ಟತೆಯಿಂದ ಪ್ರತ್ಯೇಕವಾಗಿರಬೇಕು ಎಂದು ತಿಳಿಸಿದನು. ಒಂದು ವೇಳೆ ತನ್ನಲ್ಲಿಯೇ, "ಈ ಪತ್ರಿಕೆಯನ್ನು ಹೇಗೆ ಅಂತ್ಯಗೊಳಿಸಲಿ ಎಂದು ತಿಳಿದಿರಬಹುದು?" "ಈ ಕ್ರೈಸ್ತರು ಯೋಗ್ಯರಾಗಿ ಜೀವಿಸುವದಕ್ಕೆ ಸಹಾಯಕವಾಗುವಂತೆ ಕೆಲವು ಪ್ರಾಯೋಗಿಕವಾದ ಸಲಹೆಗಳನ್ನು ನೀಡಲು ಬಯಸಿರಬಹುದು." ಹೊಸ ಒಡಂಬಡಿಕೆ ಇತರೆ ಪತ್ರಿಕೆಗಳನ್ನು ಅಂತ್ಯಗೊಳಿಸಿರುವಂತೆಯೇ ಮಾಡಿ, ಪ್ರಾಯೋಗಿಕವಾದ ಎಚ್ಚರಿಕೆಗಳನ್ನು ನೀಡಿರಲೂ ಬಹುದು! ಈ ಸಲಹೆಗಳ ಮೂಲಕ ಕ್ರೈಸ್ತರಾದ ನಾವುಗಳು ಒಂದು ಸಮತೋಲನ ವಾದ ಜೀವಿತವನ್ನು ಜೀವಿಸಲು ಸಾಧ್ಯವಾಗುತ್ತದೆ.

ಸಮತೋಲನ ಜೀವಿತದ ಅಗತ್ಯವನ್ನು ಅರ್ಥಮಾಡಿಕೊಳ್ಳಬಹುದು, ಉದಾಹರಣೆ: ಆ ಕೆಲಸವು ಸರಿಯಾದದ್ದೆ ಎಂಬುದಾಗಿ ಇರುತ್ತದೆ. ಕೆಲವರು ವಾರಕ್ಕೆ ಅರವತ್ತು ಅಥವಾ ಎಂಬತ್ತು ಗಂಟೆಗಳ ಕಾಲ "ಕಾರ್ಯಪ್ರವೃತ್ತರಾಗಿ" ಇತರೆ ಕಾರ್ಯಗಳನ್ನು ಅಸಡ್ಡೆ ಮಾಡಿರಬಹುದು. ಇನ್ನು ಕೆಲವರು ತಮ್ಮ ಸಮಯವನ್ನು ತಮ್ಮ ಹವ್ಯಾಸ ಅಥವಾ ಆಟಗಳಲ್ಲಿ ಮತ್ತು ದೈಹಿಕ ವ್ಯಾಯಾಮಗಳಲ್ಲೂ ಕಳೆದಿರಬಹುದು. ಈ ಎಲ್ಲಾ ಜನರುಗಳು ಸಮತೋಲನವಾದ ಜೀವಿತವನ್ನು ಜೀವಿಸಬೇಕೆಂಬ ಪ್ರೋತ್ಸಾಹವನ್ನು ಹೊಂದಬೇಕಿದೆ ಅಂಥವರು ತಮ್ಮ ಕುಟುಂಬಗಳ ಸಂಗಡ ಹೆಚ್ಚಿನ ಸಮಯವನ್ನು ಕಳೆ ಯುವ ಅಗತ್ಯವಿದೆ.

ಆತ್ಮೀಕವಾಗಿಯೂ, ನಾವುಗಳು ಸಮತೋಲನವಾದ ಜೀವಿತವನ್ನು ಜೀವಿಸುವ ಅಗತ್ಯವಿದೆ. ಒಬ್ಬ ಕ್ರೈಸ್ತನು ಒಂದು ಅಥವಾ ಎರಡು ಕ್ರೈಸ್ತ ನಿಯಮಗಳನ್ನು ಪಾಲಿಸಿ, ಇತರೆ ನಿಯಮಗಳನ್ನು ಪಾಲಿಸದೆ, ನಿಯಮಗಳನ್ನು ಅಲಕ್ಷಮಾಡುವ ಸಾಧ್ಯತೆಗಳಿವೆ. ಸಭೆಯ ಕೆಲವು ಸದಸ್ಯರು ಸತ್ಯವನ್ನೇ ತಿಳಿಸುವ ಗುಂಗಿನಲ್ಲಿದ್ದರೂ, ಪ್ರೀತಿ ಹಾಗೂ ಕೃಪೆಯನ್ನು ಅಲಕ್ಷ್ಯ ಮಾಡುವ ಸಾಧ್ಯತೆಗಳಿವೆ. ಕೆಲವರು ಪರಿಶುದ್ಧತೆಯ ಬಗ್ಗೆ ಹೆಚ್ಚಾಗಿ ಯೋಚಿಸಿ, ಅನೈತಿಕ ಜೀವಿತಗಳ ಬಗ್ಗೆ ಅನೇಕ ಎಚ್ಚರಿಕೆಗಳನ್ನು ನೀಡಿರಬಹುದು; ಕೆಲವರು ಆರಾಧನೆ ವಿಚಾರದಲ್ಲಿ, ಕೆಲವರು ಪ್ರೀತಿಯ ವಿಚಾರದಲ್ಲಿ, ಕೆಲವರು ದಾನಧರ್ಮದ ವಿಚಾರದಲ್ಲಿ ಮುಂದಾಗಬಹುದು. ಕೆಲವರು ಸುವಾರ್ತಾ ಕಾರ್ಯದಲ್ಲಿ ತೊಡಗಿಕೊಳ್ಳಬಹುದು.

ಸಭೆಯ ಈ ಎಲ್ಲಾ ಚಿಂತನೆಗಳು ಒಳ್ಳೆಯವೇ ಮತ್ತು ಅವುಗಳನ್ನು ಮಾಡಲೇ ಬೇಕು. ಒಬ್ಬನ ತಲಾಂತು ಅವನನ್ನು ಒಂದು ಆಸಕ್ತಿಗಿಂತ, ಇನ್ನೊಂದು ಆಸಕ್ತಿಗೆ ನಡೆಸಬಹುದು, ಆದರೆ ಸಮತೋಲನ ಹೊಂದಿದ ವ್ಯಕ್ತಿ ಸಕಲ ವಿಧವಾದ ಒಳ್ಳೆಯ ಕಾರ್ಯಗಳಿಗೆ ಆಸಕ್ತಿಯನ್ನು ತೋರುವನು. ನಾವು ಸಮತೋಲನವಾದ ಆತ್ಮೀಕ ಜೀವನವನ್ನು ಆಯ್ದುಕೊಳ್ಳಬೇಕು. ಇಬ್ರಿಯ 13ರಲ್ಲಿ, ಅದರ ಕುರಿತು ಬರೆಯಲಾಗಿದೆ. ಆ ವಿದಧ ಜೀವಿತದ ಗುಣಲಕ್ಷಣಗಳನ್ನು ಗಮನಿಸೋಣ.

### ಪ್ರೀತಿಯ ಒಂದು ಜೀವಿತ

*ಮೊದಲನೆಯದಾಗಿ, ಸಮತೋಲನವಾದ ಜೀವಿತದಲ್ಲಿ ಪ್ರೀತಿಯು ಇರುತ್ತದೆ,*

ಮುಖ್ಯವಾಗಿ ಸಹೋದರರ ಪ್ರೀತಿಯು ಇರುತ್ತದೆ (ಇಬ್ರಿಯ 13:1-3). ಅಧ್ಯಾಯ 13ರಲ್ಲಿ ಸಾಮಾನ್ಯ ಹೇಳಿಕೆಯನ್ನು ನೀಡಿ: ಸಹೋದರರ ಸ್ನೇಹವು ನೆಲೆಯಾಗಿರಲಿ. ಎಂಬುದಾಗಿದೆ. ಆ ಕ್ರೈಸ್ತರು ಅನಿಶ್ಚಯವಾದ ಭವಿಷ್ಯವನ್ನು ಹೊಂದಿದ್ದರಿಂದಲೂ, ಹಿಂಸೆ ಹಾಗೂ ಭ್ರಷ್ಟತೆಯ ಅಪಾಯದಲ್ಲಿದ್ದರಿಂದಲೂ, ಅವರು ಸಹೋದರರ ಪ್ರೀತಿಯಲ್ಲಿ ನೆಲೆಯಾಗಿರಬೇಕಿತ್ತು! ಅವರು ಈಗಾಗಲೇ ಸಹೋದರರ ಪ್ರೀತಿಯನ್ನು ಹೊಂದಿದ್ದರು: ಅವರು ಅದನ್ನು ಮುಂದುವರೆಸ ಬೇಕಿತ್ತು, ಪ್ರಾಯಶಃ ಅದಕ್ಕೆ ಅವರು ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಬೇಕಿತ್ತು, ನಾವು ಪರಸ್ಪರ ಪ್ರೀತಿಯನ್ನು ಕಾಪಾಡಬೇಕಿತ್ತು. ಅದು ಮುಂದುವರೆದು ಪರಸ್ಪರ ಹೊಂದಾಣಿಕೆಯಲ್ಲಿ ತೋರ್ಪಡಬೇಕಿತ್ತು.

ಸಹೋದರರ ಪ್ರೀತಿಯನ್ನು ಎರಡು ವಿಧದಲ್ಲಿ ತೋರ್ಪಡಬೇಕಿತ್ತು:

(1) "ಅತಿಥಿ ಸತ್ಕಾರ ಮಾಡಿರಿ." ಮೊದಲ ಶತಮಾನದ ಕ್ರೈಸ್ತರು ಪ್ರಯಾಣ ಮಾಡುವಾಗ, ಕ್ರೈಸ್ತರ ಮನೆಗಳನ್ನು ಹೊರತು ಪಡಿಸಿ, ಬೇರೆ ನಿಕರವಾದ ಮನೆಗಳು ಅವರಿಗೆ ಇರಲಿಲ್ಲ. ಆದ್ದರಿಂದ ಪ್ರಯಾಣ ಮಾಡುವ ದೇವ ಜನರಿಗೆ "ಸತ್ಕಾರ" ಮಾಡಿರಿ ಎಂಬ ತಾತ್ಪರ್ಯವಿರಬಹುದು.

(2) "ಸೆರೆಯವರನ್ನು ನೆನಪು ಮಾಡಿಕೊಳ್ಳಿರಿ." ಸಾಮಾನ್ಯವಾದ ಸೆರೆಯವರಿಗಾಗಿ ಚಿಂತನೆ ಮಾಡಿರಿ ಎಂದಿರದೆ,[1] ನಂಬಿಕೆಗಾಗಿ ಸೆರೆಯಾದವರ ಕುರಿತಾಗಿರುತ್ತದೆ.

ನಾವುಗಳು ಸಹ ಸಹೋದರರಿಗೂ ಹಾಗೂ ಸಂಕಷ್ಟದಲ್ಲಿರುವ ದೇವಜನರಿಗೂ ಚಿಂತನೆ ಮಾಡುವವರಾಗಿರಬೇಕು, *ಕ್ರೈಸ್ತ ಜೀವಿತವು ಪ್ರೀತಿಯ ಜೀವಿತವಾಗಿದೆ.*

## ನೈತಿಕವಾದ ಒಂದು ಜೀವನ

*ಎರಡನೆಯದಾಗಿ ಸಮತೋಲನವಾದ ಜೀವಿತವು ನೈತಿಕವಾದ ಒಂದು ಜೀವಿತವಾಗಿರುತ್ತದೆ.* ಇಲ್ಲಿ ಮದುವೆಯ ಸಂಬಂಧದ ಹೇಳಿಕೆಯಿದೆ. ಇಬ್ರಿಯ 13:4ರಲ್ಲಿ, "ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರು ಎಣಿಸಬೇಕು; ಗಂಡ ಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿ ಸುವನೆಂದು ತಿಳುಕೊಳ್ಳಿರಿ." ಕ್ರೈಸ್ತರು ದಾಂಪತ್ಯವು ವಿಶೇಷವಾದದ್ದು ಎಂದು ಈ ವ್ಯಾಖ್ಯಾನವು ತಿಳಿಸುತ್ತದೆ!

ಕ್ರೈಸ್ತ ಮದುವೆಯನ್ನು ಅಲಕ್ಷ್ಯವಾಗಿ ಗಮನಿಸಬಾರದು; "ಅದನ್ನು ಮಾನ್ಯವಾದದ್ದೆಂದು ಪರಿಗಣಿಸಬೇಕು" ಮದುವೆಯಾಗದೆ ಕನ್ಯೆಯಾಗಿರುವದೇ ಲೇಸು ಎಂದು ಹೇಳಲಾಗಿದೆ. ಈ ದಿನಗಳಲ್ಲಿ ಮದುವೆಯ ವಿಚಾರವು ಅಲಕ್ಷ್ಯಕ್ಕೆ ಒಳಗಾಗಿದೆ. ನನ್ನ ಹೆಂಡತಿಯು ಸಮಾಜ ಶಾಸ್ತ್ರದ ಪ್ರಧ್ಯಾಪಕಿಯಾಗಿರುವದರಿಂದ, ತನ್ನ ತರಗತಿಯಲ್ಲಿ ಮದುವೆಯ ಕುರಿತು ಚರ್ಚೆ ನಡೆಸಲಾಗುತ್ತದೆ. ಅಲ್ಲಿ ಸೇರಿರುವ ಮೂವತ್ತು ಜನರಲ್ಲಿ, ಆಕೆಯೊಬ್ಬಳು ಮಾತ್ರ ಮದುವೆಯ ಕುರಿತು ನೈತಿಕ ಮಾತನ್ನು ಆಡುತ್ತಾಳೆ! ಪ್ರಪಂಚವು ಏನೇ ತಿಳಿದರೂ, ಕ್ರೈಸ್ತರು ಮಾತ್ರ ದಾಂಪತ್ಯವನ್ನು ಮಾನ್ಯವಾದದ್ದೆಂದು ಪರಿಗಣಿಸಬೇಕು!

ವಿಶೇಷವಾಗಿ, ನಂಬಿಗಸ್ತರಾದ ಕ್ರೈಸ್ತರ ಮದುವೆಯು ವಿಶಿಷ್ಟವಾದದ್ದಾಗಿದೆ. ಏಕೆಂದರೆ "ಗಂಡಹೆಂಡರ ಸಂಬಂಧವು" ನಿಷ್ಕಳಂಕವಾಗಿರಬೇಕು. ಅವರು ಅನೈತಿಕ ಹಾಗೂ ಜಾರತ್ವದ ಜೀವಿತಕ್ಕೆ ಸಂಬಂಧಪಟ್ಟವರಲ್ಲ ಏಕೆಂದರೆ? ಜಾರತ್ವವು ಪಾಪವಾಗಿರುವದರಿಂದ, ದೇವರು ಅವರನ್ನು ಶಿಕ್ಷಿಸುತ್ತಾನೆ ಎಂಬ ಅಂಶವನ್ನು ಅವರು ಅರಿತಿರುವರು. ನಾವು ಅಂತಹ ಪಾಪಗಳಿಂದ ಹೊರತಾಗಿರಬೇಕು! *ಕ್ರೈಸ್ತ ಜೀವಿತವು ಪರಿಶುದ್ಧವಾದ ಜೀವಿತವಾಗಿದೆ!*

## ಭರವಸದ ಒಂದು ಜೀವಿತವಾಗಿದೆ

*ಮೂರನೆಯದಾಗಿ, ಸಮತೋಲನವಾದ ಜೀವಿತವು ಒಂದು ಭರವಸದ ಜೀವಿತವಾಗಿದೆ.*

ಹಣದ ಕುರಿತಾಗಿ, ಇಬ್ರಿಯ 13:5, 6ರಲ್ಲಿ, ಎರಡು ವಿಧವಾದ ಆ ದೇಶಗಳನ್ನು ನೀಡಲಾಗಿದೆ. ಕ್ರೈಸ್ತರಾದ ನಾವು ಹಣದ ವಿಚಾರದಲ್ಲಿ ಸಂತೃಪ್ತಿ ಹೊಂದಿದವರಾಗಿ, ಹಣದಾಶೆಯಿಂದ ದೂರವಿರಬೇಕು. ಹೊಸ ಒಡಂಬಡಿಕೆಯಲ್ಲಿ ನಿರ್ಲಕ್ಷಕ್ಕೆ ಒಳಗಾಗಿರುವ ಒಂದು ಆದೇಶ ವೇನೆಂದರೆ, ಈ ಅಪ್ಪಣೆಯೇ ಆಗಿರುತ್ತದೆ! ಆಧುನಿಕ ಜೀವನ ಶೈಲಿಯಲ್ಲಿ ಹಣದಾಶೆಯು ಪ್ರಮುಖ ಅಂಶವಾಗಿದೆ.

ಹಣದಾಶೆ ಎಂದರೇನು? ಹಣವನ್ನು ಹೊಂದುವದರಲ್ಲಿ ಯಾವುದೇ ಪ್ರಮಾದವಿರುದಿಲ್ಲ. ಸಮಾಜದ ಪ್ರತಿಯೊಬ್ಬರಿಗೂ ಹಣದ ಅಗತ್ಯವಿದೆ. ಹಾಗಾದರೆ ಹಣದಾಶೆ ಎಂದರೇನು. ಪ್ರಾಯಶಃ ವಾಕ್ಯದ ಎರಡನೇ ಭಾಗವು ಮೊದಲ ಭಾಗದ ಪ್ರಶ್ನೆಗೆ ಉತ್ತರ ನೀಡುತ್ತದೆ: ಹೆಚ್ಚೆಚ್ಚು ಹಣವನ್ನು ಬಯಸುವದೇ ಆಗಿದೇ, ಇದರಿಂದ ನಮಗೆ ವಿವರಣೆ ದೊರಕಿತಲ್ಲವೇ?

ಈ ವಚನದಲ್ಲಿ ವಿಧೇಯತೆಗೆ ಅಗತ್ಯವಿರುವ ಕಾರಣವನ್ನು ನೀಡಲಾಗಿದೆ. ನಾವು ಏಕೆ ಹಣದಾಶೆವುಳ್ಳವರಾಗಿರಬಾರದು? ಏಕೆಂದರೆ ದೇವರೇ ನಮಗಾಗಿ ಚಿಂತಿಸುವವನಾಗಿದ್ದಾನೆ (13:5ಬಿ, 6)! ನಾವು ಹಣದಾಶೆವುಳ್ಳವರಾಗಿದ್ದರೆ, ನಾವು ಅತೃಪ್ತರೇ, ನಾವು ಹೆಚ್ಚು ಸ್ವಾಸ್ಥ್ಯವನ್ನು ಬಯಸುವವರು, ಸಂರಕ್ಷಣೆಗಾಗಿ ಹೆಚ್ಚು ಹಣವನ್ನು ಬಯಸುವವರು ಆಗಿದ್ದರೆ, ನಾವು ದೇವರಲ್ಲಿ ಭರವಸೆ ಇಲ್ಲದವರು ಎಂಬ ಸೂಚನೆಯಾಗಿದೆ? *ಕ್ರೈಸ್ತ ಜೀವಿತವು ಒಂದು ಭರವಸದ ಜೀವಿತವಾಗಿದೆ.*

## ಸತ್ಯದ ಒಂದು ಜೀವಿತ

*ನಾಲ್ಕನೆಯದಾಗಿ, ಸಮತೋಲನವಾದ ಜೀವಿತವು ಸತ್ಯದ ಒಂದು ಜೀವಿತವಾಗಿದೆ.* ಇಬ್ರಿಯ 13:7-14ರ ವಾಕ್ಯವನ್ನು ಅರ್ಥೈಸುವದಾದರೆ, ಮೊದಲ ಓದುಗರು ಬಿದ್ದು ಹೋಗುವ ಅಪಾಯದ ಅಂಚಿನಲ್ಲಿದ್ದರು. ಅವುಗಳಲ್ಲಿ ಕೆಲವನ್ನು ಸುಳ್ಳು ಬೋಧ ಕರುಗಳು ಪ್ರತಿಪಾದಿಸಿಕೊಂಡಿದ್ದರು. ಏಕೆಂದರೆ ಈ ಭಾಗದಲ್ಲಿ, "ಅನ್ಯೋಪದೇಶ" ಎಂದು ಬರೆಯಲಾಗಿದೆ (13:9).

ಈ ಸುಳ್ಳು ಪ್ರವಾದಿಗಳು ಏನನ್ನು ಬೋಧಿಸುತ್ತಿದ್ದರು? ಅವರು ಆಹಾರದ ಕುರಿತು ಹೇಳುತ್ತಿದ್ದರು, ವಚನ 9ರಲ್ಲಿ, "ಭೋಜನ ಪದಾರ್ಥಗಳಿಂದಲ್ಲದೇ ದೇವರ ಕೃಪೆಯನ್ನು ಹಾತುಕೊಂಡು ಬಲವುಳ್ಳವರಾಗಬೇಕೆಂದು" ಬರೆಯಲಾಗಿದೆ. ಸುಳ್ಳು ಬೋಧಕರುಗಳು ಸಹ ಯುದಾಯ ಮತದ ಬಗ್ಗೆ ಬೋಧಿಸುವವರಾಗಿದ್ದರು. ವಚನ 10ರಲ್ಲಿ, "ನಮಗೊಂದು ಯಜ್ಞವೇದಿಯುಂಟು. ಈ ವೇದಿಯ ಪದಾರ್ಥಗಳನ್ನು ತಿನ್ನುವದಕ್ಕೆ ಯೆಹೂದ್ಯರ ಗುಡಾರದಲ್ಲಿ ಸೇವೆಯನ್ನು ನಡಿಸುವವರಿಗೆ ಹಕ್ಕಿಲ್ಲ" ಎಂದು ಬರೆದದೆ. ಯುದಾಯ ಮತವನ್ನು ಬೋಧಿಸುತ್ತಿದ್ದವರಿಗೆ ಈ ಹೇಳಿಕೆಯನ್ನು ನೀಡಿರಬಹುದು. ಆಹಾರ ವಿಶೇಷಿಸುವ ವಿಚಾರದ ಮೂಲಕ ಯುದಾಯ ಮತವನ್ನು ಅವರು ಪ್ರಚುರ ಪಡಿಸಿರಬಹುದು. ಇವರುಗಳು ದೇವರ ಜನರನ್ನು ಸುಳ್ಳು ಬೋಧನೆಗಳಿಗೆ ಒಳಪಡಿಸುವ ಅಪಾಯವನ್ನು ಉಂಟುಮಾಡಿದ್ದರು.

ಸುಳ್ಳು ಪ್ರವಾದಿಗಳ ಮೋಸಕ್ಕೆ ಆ ಓದುಗರು ಯಾವ ವಿಧವಾದ ಪ್ರತಿರೋಧವನ್ನು ತೋರಿದರು? (1) ಅವರಿಗೆ ದೇವರ ವಾಕ್ಯವನ್ನು ತಿಳಿಸಿದ ಸಭಾನಾಯಕರನ್ನು ನೆನಪುಮಾಡಿಕೊಳ್ಳಬೇಕಿತ್ತು (13:7, 8). ಈ ಹೇಳಿಕೆಯಲ್ಲಿ, ಅವರು ಸಾರಿದ ಬೋಧನೆಗಳನ್ನು ನೆನಪುಮಾಡಿಕೊಳ್ಳಬೇಕು ಎಂಬ ಸೂಚನೆಯೂ ಇದೆ. (2) ಆಹಾರವನ್ನು ವಿಶೇಷಿಸುವ ವಿಚಾರವನ್ನೂ ಹೊರತುಪಡಿಸಿ, ಕೃಪೆಯನ್ನೇ ಅವರು ಆಧಾರಮಾಡಿಕೊ ಳ್ಳಬೇಕಿತ್ತು (13:9). (3) ಅದರಂತೆ ಯೇಸು ಕೂಡ ಸ್ವಂತ ರಕ್ತದಿಂದ ತನ್ನ ಜನರನ್ನು ಪವಿತ್ರ ಪಡಿಸುವದಕ್ಕೊಸ್ಕರ "ಪಟ್ಟಣದ ಹೊರಗೆ" ಸತ್ತನು ಅಂದರೆ, "ಯೆಹೂದ ಮತದ ಹೊರಗೆ" ಎಂಬುದನ್ನು ನೆನಪು ಮಾಡಿಕೊಳ್ಳಬೇಕಿತ್ತು (13:12). ಅಂದರೆ ಕ್ರಿಸ್ತನು ನೀಡಿದ ರಕ್ಷಣೆಯು ಯೆಹೂದ್ಯ ಮತವನ್ನು ಅವಲಂಭಿಸಲಿಲ್ಲ ಎಂಬ ತತ್ವವಾಗಿದೆ. ಯೆಹೂದ ಮತವನ್ನು ಅವಲಂಭಿಸಿದವರಿಗೆ ಕ್ರಿಸ್ತನಲ್ಲಿ

ಪಾಲು ಇರುವಷ್ಟೆ. (4) ಅವರು "ಶಾಶ್ವತವಾದ ಪಟ್ಟಣವನ್ನು" ನೆನಪು ಮಾಡಿಕೊಳ್ಳಬೇಕಿತ್ತು (13:14). ಪ್ರಾಯಶಃ ಯೆಹೂದ್ಯರು, "ಯೆರೂಸಲೇಮನ್ನೇ ಪರಿಶುದ್ಧವಾದ ಪಟ್ಟಣವೆಂದು ಹೇಳಿ ಈ ಕ್ರೈಸ್ತರನ್ನು ವಂಚಿಸಿರಬಹುದು, ಮತ್ತು ಯೆರೂಸಲೇಮ ಧಾರ್ಮಿಕ ಕೇಂದ್ರವಾಗಿದೆ ಎಂದು ಹೇಳಿರಬಹುದು. ನಿಮ್ಮ ಪಟ್ಟಣ ಎಲ್ಲಿರುತ್ತದೆ?" "ನಮ್ಮ ಪಟ್ಟಣವು ಮುಂದೆ ಬರಲಿರುವ ನಿತ್ಯವಾಗಿರುವ ಪರಲೋಕದ ಪಟ್ಟಣವಾಗಿದೆ."

ಸಮತೋಲನವಾದ ಜೀವಿತಕ್ಕೆ ಈ ವಾಕ್ಯವು ಹೇಗೆ ಅನ್ವಯಿಸುತ್ತದೆ? ಈಗಾಗಲೇ ಅನ್ಯೋಪದೇಶಗಳ ಹಾವಳಿ ಇದ್ದದ್ದರಿಂದ, ಈ ಕುರಿತಾಗಿ ಚಿಂತನಮಾಡದೆ, ಒಬ್ಬನು ಸಮತೋಲನವಾದ ಜೀವಿತವನ್ನು ಜೀವಿಸುವದು ಅಸಾಧ್ಯವಾಗಿದೆ. ಸುವಾರ್ತಾ ಸೇವೆ, ದಾನ ಧರ್ಮಗಳಿಲ್ಲದೆ, ಮತ್ತು ಪ್ರೀತಿಯಿಲ್ಲದೆ ಸತ್ಯದ ಬೋಧನೆಯು ನಿರರ್ಥಕ ಎಂದು ಒಬ್ಬನು ಹೇಳಬಹುದು. ಹೇಗಿದ್ದರೂ ಸತ್ಯವನ್ನು ಬೋಧಿಸದಿದ್ದರೆ, ಸುವಾರ್ತೆ ಸೇವೆ, ಹಾಗೂ ದಾನಧರ್ಮಗಳು ನಿರರ್ಥಕವೇ. ಸತ್ಯ ಬೋಧನೆಯ ಕುರಿತು ಚಿಂತನೆ ಮಾಡೋಣ! *ಕ್ರೈಸ್ತತ್ವವು ಸತ್ಯಕ್ಕೆ ಸಮರ್ಪಿಸಿಕೊಂಡ ಜೀವಿತವಾಗಿದೆ.*

## ಸ್ತುತಿಯ ಒಂದು ಜೀವನ

*ಐದನೆಯದಾಗಿ, ಸಮತೋಲನವಾದ ಜೀವಿತವು ದೇವರನ್ನು ಸ್ತುತಿಸುವ ಒಂದು ಜೀವನವಾಗಿರುತ್ತದೆ.* ಇಬ್ರಿಯ 13:15: "ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡಬಿಡದೆ ಸಮರ್ಪಿಸೋಣ, ಆತನನ್ನು ಬಾಯಿಂದ ಪ್ರತಿಜ್ಞೆ ಮಾಡುವದು ನಾವು ಆತನಿಗೆ ಅರ್ಪಿಸುವ ಯಜ್ಞವಾಗಿದೆ." ಯುದಾಯ ಮತದಲ್ಲಿರುವ ಕೆಲವು ಯಜ್ಞದ ತಾತ್ಪರ್ಯವನ್ನು ಈ ವಾಕ್ಯದಲ್ಲಿಯೂ ಬರೆಯಲಾಗಿದೆ, ಆದರೆ ಅದರಲ್ಲಿ ಪ್ರಮುಖವಾದ ವ್ಯತ್ಯಾಸ ಅಡಗಿದೆ. ಯೆಹೂದ್ಯರು ಪಶುಗಳ ಯಜ್ಞವನ್ನು ಅರ್ಪಿಸಿದರೆ, ಕ್ರೈಸ್ತರು ಸ್ತುತಿಯಜ್ಞವನ್ನೇ ಸಮರ್ಪಿಸುವರು.

ಕ್ರೈಸ್ತರು ಸ್ತುತಿಯಜ್ಞವನ್ನು (ಎ) ದೇವರಿಗೆ, (ಬಿ) ತುಟಿಗಳಿಂದಲೂ (ನಾವು ಹಾಡುವಾಗ) (ಸಿ) ಎಡಬಿಡದೆ, ಅರ್ಪಿಸಬೇಕು. *ಕ್ರೈಸ್ತ ಜೀವಿತವು ಸ್ತುತಿಯಲ್ಲಿ ಮುಂದುವರೆಯುವ ಜೀವಿತ ವಾಗಿದೆ.*

## ಕೊಡುವಂಥ ಒಂದು ಜೀವಿತವಾಗಿದೆ

*ಆರನೆಯದಾಗಿ, ಒಂದು ಸಮತೋಲನವಾದ ಜೀವಿತವು ಇತರರಿಗೆ ಕೊಡುವಂಥ ಜೀವಿತವಾಗಿದೆ.* ವಚನ 16ರಲ್ಲಿ: "ಇದಲ್ಲದೆ ಪರೋಪಕಾರವನ್ನು, ಧರ್ಮಮಾಡುವದನ್ನು ಮರೆಯ ಬೇಡಿರಿ." ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು. *ಕ್ರೈಸ್ತ ಜೀವಿತವು ಕೊಡುವಂತ ಜೀವಿತವಾಗಿದೆ!*

## ಒಂದು ಗೌರವಯುತವಾದ ಜೀವಿತವಾಗಿದೆ

ಏಳನೆಯದಾಗಿ, ಸಮತೋಲನವಾದ ಜೀವಿತವು ನಾಯಕರುಗಳನ್ನು ಗೌರವಿಸುವ ಒಂದು ಜೀವಿತವಾಗಿದೆ. ವಚನ 17ರಲ್ಲಿ, "ನಿಮ್ಮ ಸಭಾ ನಾಯಕರ ಮಾತನ್ನು ಕೇಳಿರಿ ಅವರಿಗೆ ಅಧೀನರಾಗಿರಿ" ಎಂದಿದೆ. ವಚನ 7ರಲ್ಲಿ ಹಿಂದಿನ ನಾಯಕರನ್ನು ನೆನಪು ಮಾಡಿ ಕೊಳ್ಳಿರಿ ಎಂದಿರುತ್ತದೆ (ವಾಕ್ಯ ತಿಳಿಸಿದ) ಅವರು ಈಗಾಗಲೇ ತಮ್ಮ ಪ್ರತಿಫಲದ ಸ್ಥಳವಾದ ಪರಲೋಕಕ್ಕೆ ಏರಿ ಹೋಗಿದ್ದಾರೆ. ಆದರೆ ವಚನ 17ರಲ್ಲಿ, ವರ್ತಮಾನಕಾಲದಲ್ಲಿರುವ ನಾಯಕರ ಕುರಿತು ಹೇಳಲಾಗಿದೆ; ಅವರು ಇನ್ನೂ ಸಹ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ಯಾರಾಗಿದ್ದಾರೆ? ಸಭೆಯ ಹಿರಿಯರ ಕುರಿತಾಗಿ ಹೇಳಿರಬಹುದು. ಆದ್ದರಿಂದ ಈ ವಚನದಲ್ಲಿ ಎರಡು ಪ್ರಸ್ತಾಪನೆ ಮಾಡಲಾಗಿದೆ:

(1) *ಹಿರಿಯರ ಹೊಣೆಗಾರಿಕೆ:* "ಅವರು ಸಭೆಯ ಆತ್ಮಗಳನ್ನು ಕಾಯುವವರಾಗಿದ್ದಾರೆ." ಅವರು ಪ್ರಭುಗಳಾಗಿ, ನಿರ್ಣಯಗಳನ್ನು ಮಾಡುವವರಲ್ಲ; ಅವರ ಕೈಕೆಳಗಿರುವ ಆತ್ಮಗಳ ಹೊಣೆಯನ್ನು ಹೊತ್ತಿದ್ದಾರೆ, ಎಂಥಹ ವಿಶೇಷವಾದ ಹೊಣೆಯಾಗಿದೆ!

(2) *ಸಭಾನಾಯಕರೊಂದಿಗೆ, ಸಭೆಯ ಸಂಬಂಧದ ಕುರಿತು ಪ್ರಸ್ತಾಪಿಸಲಾಗಿದೆ:* ಸದಸ್ಯರುಗಳು ಸ್ಥಳೀಯ ಸಭೆಯ ನಾಯಕರಿಗೆ "ವಿಧೇಯತೆಯಿಂದ" "ಅಧೀನರಾಗಬೇಕು." ಅವರು ಹಿರಿಯರ ನಾಯಕತ್ವವನ್ನು ಒಪ್ಪಿಕೊಳ್ಳಬೇಕು. ಹೊಣೆ ಹೊತ್ತ ನಾಯಕರಿರುವ ಹಾಗೂ ಗೌರವ ನೀಡುವ ಸದಸ್ಯರಿರುವ ಸಭೆಯು ಆನಂದವಾಗಿರುತ್ತದೆ!

ಸಭೆಯ ಹೊರಗೂ, ಒಳಗೂ ಅಧೀನತೆಯ ನಿಯಮವನ್ನು ಪಾಲಿಸಬೇಕು. *ಕ್ರೈಸ್ತ ಜೀವಿತವು ಅಧೀನತೆಯ ಜೀವಿತವನ್ನು ಹೊಂದಿರುತ್ತದೆ.*

## ಒಂದು ವಿಧೇಯತೆಯ ಜೀವಿತ

ಎಂಟನೆಯದಾಗಿ, ಸಮತೋಲನದ ಜೀವಿತವು ಒಂದು ವಿಧೇಯತೆಯ ಜೀವಿತವಾಗಿರುತ್ತದೆ (ಇಬ್ರಿಯ 13:20, 21). ಪತ್ರಿಕೆಯು ಪ್ರಾರ್ಥನೆಯಿಂದ ಅಂತ್ಯಗೊಂಡಿದೆ. (ವೈಯಕ್ತಿಕವಾದ ಸಂಕ್ಷಿಪ್ತ ಸಂದೇಶ). "ದೇವರ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳಿಗೆ ಬೇಕಾದ ಅನುಕೂಲತೆಗಳನ್ನು ನಿಮಗೆ ಅನುಗ್ರಹಿಸಲಿ" ಎನ್ನಲಾಗಿದೆ. ಪ್ರಾರ್ಥನೆ, ನಮ್ಮ ಜೀವಿತದ ಗುರಿಯಾಗಿರಬೇಕು: "ಅದನ್ನು ದೇವರು ಮೆಚ್ಚುತ್ತಾನೆ." *ಕ್ರೈಸ್ತತ್ವ ದೇವರ ಚಿತ್ತ ಹಾಗೂ ಉದ್ದೇಶವನ್ನು ಈಡೇರಿಸುವ ಜೀವಿತವಾಗಿದೆ.*

## ಮುಕ್ತಾಯ

ನೀವು ಯಾವ ರೀತಿ ಅಳೆಯುವಿರಿ? ಇಬ್ರಿಯ 13ರ ಪ್ರಕಾರ ನಿಮ್ಮ ಜೀವಿತವು ಸಮತೋಲನವಾಗಿ ಪೂರ್ಣವಾಗಿದೆಯೇ? ಈ ಪಾಠದ ಪ್ರಕಾರವಾಗಿ ನಮ್ಮ ಜೀವಿತಗಳನ್ನು ಪರಿಕ್ಷಿಸಿಕೊಳ್ಳುವದು ಉತ್ತಮವಾಗಿದೆ. ನಾವು ಬಲಹೀನರಾಗಿದ್ದರೆ, ತಿದ್ದುಪಡಿಮಾಡಿಕೊಳ್ಳೋಣ.

ಉದಾಹರಣೆ: ಪ್ರೀತಿಯ ಬಗ್ಗೆ ಹೆಚ್ಚು ಗಮನ ನೀಡಿ ಸತ್ಯದ ಬಗ್ಗೆ ಅಲ್ಪ ಗಮನ ನೀಡುವುದಾದರೆ ಕ್ರೈಸ್ತತ್ವದ ಮೌಲ್ಯಗಳನ್ನು ಅಲಕ್ಷ್ಯಮಾಡಿದವರಾಗುತ್ತೇವೆ. ಆದ್ದರಿಂದ ಕ್ರೈಸ್ತ ಜೀವಿತವನ್ನು ಸಮತೋಲನವಾಗಿ ಇಟ್ಟುಕೊಳ್ಳಲು ಪ್ರಯತ್ನಿಸೋಣ. ಕೆಲವರು ದೇವರನ್ನು ತೊರೆದು ಜೀವಿತವನ್ನು ಅಸಮತೋಲನ ಮಾಡಿಕೊಂಡಿದ್ದಾರೆ. ಪ್ರಾಯಶಃ ನೀನು ಧೈಹಿಕ ವಾಗಿ ಪರಿಪೂರ್ಣನಾಗಿರಬಹುದು, ಆರ್ಥಿಕವಾಗಿ ಸದೃಢನಾಗಿರಬಹುದು, ಸಾಮಾಜಿಕ ವೃದ್ಧಿಯನ್ನು ಹೊಂದಿರಬಹುದು ಮತ್ತು ಜ್ಞಾನದಲ್ಲಿ ಮೇಧಾವಿಯೂ ಆಗಿರಬಹುದು - ಆದರೆ ನಿನ್ನ ಜೀವಿತದಲ್ಲಿ ಕ್ರಿಸ್ತನನ್ನು ಹಾಗೂ ಕ್ರಿಸ್ತನ ಸದ್ಗುಣಗಳನ್ನು ಅಳವಡಿಸಿಕೊಳ್ಳದಿದ್ದರೆ ಇಬ್ರಿಯ 13ರಲ್ಲಿ ಇರುವಂತೆ ನೀನು ಮೂಲ ಕೊರತೆಗಳನ್ನು ಹೊಂದಿರುವವನಾಗಿರುತ್ತೀ!

---

ಟಿಪ್ಪಣಿ

[1]ಸೆರೆವಾಸಿಗಳನ್ನು ನೋಡಿಕೊಳ್ಳುವದು ಒಳ್ಳೇಯದೇ, ಆದರೆ ಇಲ್ಲಿ ಈ ಅರ್ಥವನ್ನು ನೀಡಿರುವದಿಲ್ಲ. ಈ ದಿನಗಳಲ್ಲಿ ಅನೇಕ ಸಭೆಗಳು ಬಂದಿಖಾನೆ ಸೇವೆಯನ್ನು ಮಾಡುತ್ತಿದ್ದಾರೆ.